ಹೊತ್ತಿಗೆ ಹ್ಯಾಡ್ಲಿ ಹೆಂಡತಿ, ‘ಸ್ವಲ್ಪ ಹುಶಾರಿ, ಕಪ್ಪೆ ಹಿಡಿಯಲು ಇಲ್ಲಿ ಹಾವುಗಳೂ ಬಂದು ಕೂತಿರುತ್ತವೆ. ಕಂಡರೆ ಹೇಳಿ. ಹೆದರಬೇಡಿ’ ಎಂದು ತಣ್ಣಗೆ ಎಚ್ಚರಿಸಿದಳು. ಈಕೆ ಹಾವು ಹಿಡಿಯುವ ಕುಶಲತೆಯ ತರಬೇತಿಯನ್ನು ಕೇರಳದಲ್ಲಿ ಎರಡು ವರ್ಷ ಪಡೆದು ಬಂದಿದ್ದಳು. ಹಾವು ಹಿಡಿಯುವ ಕೊಕ್ಕೆ ಸ್ಟೀಲಿನ ರಾಡು ಯಾವಾಗಲೂ ಅವಳ ಬೆನ್ನ ಮೇಲೆ ನೇತಾಡುತ್ತಿತ್ತು. ಒಬ್ಬಳೇ ಸರಿ ರಾತ್ರಿಯಲ್ಲಿ ದಟ್ಟ ಕಾಡಿನೊಳಗೆ ಫೋಟೊಗ್ರಫಿ ಹವ್ಯಾಸವುಳ್ಳವರನ್ನು ಕರೆದುಕೊಂಡು ಹೋಗಿ, ಮಾರ್ಗದರ್ಶನ ಮಾಡಿ ಬರುವ ದಿಟ್ಟತೆ ಆಕೆಗಿತ್ತು. ಇವಳ ಧೈರ್ಯ ಮತ್ತು ಗಟ್ಟಿತನ ಈಗಲೂ ನನಗೆ ಅಭಿಮಾನದಿಂದ ನೆನಪಾಗುತ್ತದೆ.

ರಾತ್ರಿ ಹನ್ನೆರಡಾಗುವ ಹೊತ್ತಿಗೆ ಮತ್ತೊಂದು ವಿಶೇಷ ಕಪ್ಪೆ ಚಿತ್ರ ತೆಗೆಯಲು ಕೊಂಚ ಕೊರಕಲಾದ ಬೆಟ್ಟದ ಮತ್ತೊಂದು ಬದಿಗೆ ಹೋಗೋಣ ಎಂದರು. ಅಲ್ಲಿ ಕೊಂಚ ಜಾರಿಕೆ ಇದೆ. ಹುಶಾರಾಗಿ ಬರಬೇಕು ಎಂದರು. ನನಗೆ ಇಷ್ಟು ಹೇಳುವುದು ಸಾಕಿತ್ತು. ಮೊದಲೇ ದಿನವಿಡೀ ಡ್ರೈವಿಂಗ್ ಮಾಡಿ ಸುಸ್ತಾಗಿದ್ದ ನಾನು, ‘ನನ್ನ ಕೈಯಲ್ಲಿ ಆಗಲ್ಲ. ನಾ ಇಲ್ಲೇ ಕತ್ತಲಲ್ಲಿ ಕೂತಿರ್ತೇನೆ. ನೀವು ಹೋಗಿ ಬನ್ನಿ’ ಎಂದು ಶಶಿಸಿಂಗ್ ಹಾಗೂ ಶ್ರೀಕಾಂತ್ ಅವರನ್ನು ಕಳಿಸಿದೆ. ಒಂಟಿಯಾಗಿ ಹೀಗೆ ಅಪರಿಚಿತ ಕಾಡಿನಲ್ಲಿ ಮೈಚಳಿಬಿಟ್ಟು ಮೌನವಾಗಿ ಕೂರುವುದು ಒಂದು ತರದ ಮಜಾ ಅನುಭವ. ನಮ್ಮೊಳಗೆ ಹುದುಗಿರುವ ಭಯಗಳು, ದೆವ್ವ, ಭೂತ, ಪಿಶಾಚಿಗಳಾಗಿ, ಮೆಲ್ಲಗೆ ಹರಿದು ಬರುವ ಸವಿಗಾಲವಿದು. ಒಂದು ಸಣ್ಣ ಶಬ್ದವಾದರೂ ಸಾವಿರ ಅರ್ಥಗಳು ಹುಟ್ಟುವ ಸುಂದರ ಗಳಿಗೆಯಿದು. ಇಂಬಳಗಳನ್ನು ಹೊಸಕಿ ಬಿಸಾಡುತ್ತಾ ಸಾವು ಯಾವ ರೂಪದಲ್ಲಿ ಬರಬಹುದೆಂದು ಧ್ಯಾನಿಸುತ್ತಾ ಸಣ್ಣಭಯದಲ್ಲೇ ಸಮಯ ಕಳೆಯುತ್ತಿದ್ದೆ.

ಸುಮಾರು ರಾತ್ರಿ ಎರಡು ಗಂಟೆಯ ಹೊತ್ತಿಗೆ ಸೋತು ಸುಣ್ಣವಾಗಿ ಅವರು ಬಂದರು. ‘ನೀವು ಬರದಿದ್ದದ್ದೇ ಒಳ್ಳೆಯದಾಯಿತು ಸರ್. ಇಳಿಜಾರು ರಸ್ತೆ ಜಾರುತ್ತಿತ್ತು. ಬಿದ್ದು ಎದ್ದು ಲೈಟಾಗಿ ಡ್ಯಾಮೇಜ್ ಆಗೇ ಬಂದಿದ್ದೇವೆ’ ಎಂದು ಹೇಳಿದರು. ಆದರೆ ನನಗೆ ಸಿಗದ ಅಪರೂಪದ ಮೂನಾರ್ ಬುಶ್ ಫ್ರಾಗ್ ನ ಫೋಟೊ ಅವರಿಗೆ ಸಿಕ್ಕಿದ್ದು ಹೊಟ್ಟೆ ಉರಿ ಎಬ್ಬಿಸಿತು. ಒಂದು ಕಿಲೋ ಮೀಟರ್ ಆಚೆ ಇರುವ ಕಪ್ಪೆ ಇಲ್ಲಿಗೆ ಬರೋದಕ್ಕೆ ಏನು ರೋಗ... ಎಂದು ಅಸಹನೆಯಲ್ಲೇ ಪ್ರಶ್ನಿಸಿದೆ. ‘ಅವು ಪರಿಸರ ಸೂಚಿಸಿದ ಜಾಗ ಬಿಟ್ಟು ಮತ್ತೆಲ್ಲೂ ವಾಸಿಸುವುದಿಲ್ಲ. ಕಪ್ಪೆಗಳ ಸಾಮ್ರಾಜ್ಯವನ್ನು ಪಕ್ಕಾಪೋಡಿ ಮಾಡಿ ದೇವರು ಹಿಸ್ಸೇ ಮಾಡಿಟ್ಟಿದ್ದಾನೆ. ಇದೇ ಪ್ರಕೃತಿಯ ಸಮತೋಲನ ವಿಧಾನ’ ಎಂದನು ಹ್ಯಾಡ್ಲಿ ರಂಜೀತ್.

‘ಒಂದು ಪ್ರದೇಶದಲ್ಲಿ ಸಾಕಷ್ಟು ಕಪ್ಪೆಗಳು ಇದ್ದಾವೆಂದರೆ ಅದು ಆರೋಗ್ಯಕರ ವಾತಾವರಣದ ಸೂಚನೆ. ಒಂದೊಮ್ಮೆ ಕಪ್ಪೆಗಳು ಸಾಯುತ್ತಿದ್ದರೆ ಆ ಜಾಗದಲ್ಲಿನ ನೀರು, ಗಾಳಿ ಅಥವಾ ಮಣ್ಣಿನಲ್ಲಿ ಏನೋ ಸಮಸ್ಯೆಯಾಗಿದೆ ಎಂದರ್ಥ. ಪರಿಸರದ ಶುದ್ಧತೆ ಅಳೆಯುವ ಮಾಪಕಗಳಲ್ಲಿ ಕಪ್ಪೆ ಕೂಡ ಒಂದು. ನೀರಿನಲ್ಲೂ, ನೆಲದಲ್ಲೂ ಜೀವಿಸುವ ಇವುಗಳಿಂದ ಮಾನವ ಪಡೆಯುತ್ತಿರುವ ಉಪಕಾರ

